ನಿಮ್ಮೊಡನೆ

# ಅಂಗಾಂಗ ದಾನ ಪ್ರಮಾಣ ಹೆಚ್ಚಳ ಸಮಾಧಾನಕರ

ನಮ್ಮ ರಾಜ್ಯ ಅಂಗಾಂಗ ದಾನ ಪ್ರಕ್ರಿಯೆಯಲ್ಲಿ ದೇಶದಲ್ಲಿಯೇ ಮೂರನೇ ಸ್ಥಾನಕ್ಕೇರಿರುವುದು ಸಮಾಧಾನಕರ ವಿಷಯ. ಅಲ್ಲದೆ 2025ರಲ್ಲಿ ಹಿಂದೆಂದಿಗಿಂತಲೂ ಹೆಚ್ಚು ಮಂದಿ ಅಂಗಾಂಗ ದಾನ ಮಾಡಿದ ವಿಚಾರವೂ ದಾಖಲಾಗಿರುವುದು ಸ್ತುತ್ಯರ್ಹ.

ರಾಜ್ಯದಲ್ಲಿ ಅಂಗಾಂಗ ದಾನ ಕ್ರಾಂತಿ ಮಹತ್ವ ಪಡೆದುಕೊಂಡಿದೆ. ಮೆದುಳು ನಿಷ್ಕ್ರಿಯಗೊಂಡವರಿಂದ ಅಂಗಾಂಗಗಳ ದಾನ ಪಡೆದು, ಚಿಕಿತ್ಸೆ ನಿರೀಕ್ಷೆಯಲ್ಲಿರುವ ವ್ಯಕ್ತಿಗಳ ಬದುಕಿಗೆ ಹೊಸ ಚೈತನ್ಯ ನೀಡುವ ಕಾಯಕ ಯಶಸ್ವಿಯಾಗಿ ನಡೆಯುತ್ತಿದೆ. ಈ ಮಾತಿಗೆ ಪುಷ್ಟಿ ನೀಡುವಂತೆ ನಮ್ಮ ರಾಜ್ಯ ಅಂಗಾಂಗ ದಾನ ಪ್ರಕ್ರಿಯೆಯಲ್ಲಿ ದೇಶದಲ್ಲಿಯೇ ಮೂರನೇ ಸ್ಥಾನಕ್ಕೇರಿರುವುದು ಸಮಾಧಾನಕರ ವಿಚಾರ. ಅಲ್ಲದೆ 2025ರಲ್ಲಿ ಹಿಂದೆಂದಿಗಿಂತಲೂ ಹೆಚ್ಚು ಮಂದಿ ಅಂಗಾಂಗ ದಾನ ಮಾಡಿದ ವಿಚಾರವೂ ದಾಖಲಾಗಿರುವುದು ಸ್ತುತ್ಯರ್ಹ.

ಮೆದುಳು ನಿಷ್ಕ್ರಿಯವಾದ ವ್ಯಕ್ತಿಯ ಉಳಿದ ಅಂಗಾಂಗಗಳು ಚೆನ್ನಾಗಿಯೇ ಇರುತ್ತವೆ. ಸಾವಿನ ಬಳಿಕ ಈ ಅಂಗಗಳನ್ನು ಮಣ್ಣು ಮಾಡುವುದರ ಬದಲು, ಅಗತ್ಯವಿರುವ ರೋಗಿಗಳಿಗೆ ಕಸಿ ಮಾಡುವ ಮೂಲಕ ಅಳವಡಿಸಲು ಸಾಧ್ಯವಿದೆ. ಅಲ್ಲದೆ ಮೆದುಳು ನಿಷ್ಕ್ರಿಯಗೊಂಡ ವ್ಯಕ್ತಿಯ ಜೀವಕೋಶಗಳ ಗುಂಪು ಆಗಿರುವ ಅಂಗಾಂಶ (Tissue) ವನ್ನೂ ದಾನ ಮಾಡಿ ಅವಶ್ಯವಿರುವವರ ಜೀವ ಉಳಿಸಬಹುದು.

ಮಾನವ ಅಂಗಾಂಗ ದಾನ ಕಸಿ ಕಾಯ್ದೆ 1994 ಅಂಗಾಂಗ ದಾನಕ್ಕೆ ಉತ್ತೇಜನ ನೀಡುತ್ತಿದೆ. ಆರೋಗ್ಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ 'ಜೀವ ಸಾರ್ಥಕತೆ' ಸಂಸ್ಥೆಯು ಅಂಗಾಂಗ ದಾನಕ್ಕೆ ಪ್ರೋತ್ಸಾಹಿಸುವುದರ ಜೊತೆಗೆ, ಅಂಗಾಂಗ ವೈಫಲ್ಯಕ್ಕೊಳಗಾದವರಿಗೆ ಅವುಗಳನ್ನು ಪೂರೈಸುವ ಕೆಲಸವನ್ನು ನಿರಂತರವಾಗಿ ಮಾಡುತ್ತಿರುವುದು ರೋಗಿಗಳಿಗೆ ವರದಾನವಾಗಿದೆ. ಒಬ್ಬ ದಾನಿಯು ಹೃದಯ, ಮೂತ್ರಪಿಂಡ, ಶ್ವಾಸಕೋಶ, ಯಕೃತ್ತು, ಸಣ್ಣ ಕರುಳು, ಮೇದೋಜೀರಕ ಗ್ರಂಥಿ ದಾನದ ಮೂಲಕ ಎಂಟು ಜೀವಗಳಿಗೆ ಹಾಗೂ ಹೃದಯದ ಕವಾಟ, ಚರ್ಮ, ಕಣ್ಣು ಗುಡ್ಡೆ ಸೇರಿ ವಿವಿಧ ಅಂಗಾಂಶಗಳ ದಾನದಿಂದ 50 ಮಂದಿಗೆ ನೆರವಾಗಬಹುದು.

ಆರೋಗ್ಯ ಇಲಾಖೆ ಮಾಹಿತಿ ಪ್ರಕಾರ ಕಳೆದ ವರ್ಷ (2025) ತಮಿಳುನಾಡಿನಲ್ಲಿ 267 ಮಂದಿಯ ಅಂಗಾಂಗಗಳನ್ನು ಪಡೆಯಲಾಗಿದ್ದು ಮೊದಲ ಸ್ಥಾನದಲ್ಲಿದೆ. ತೆಲಂಗಾಣ ಎರಡನೇ ಸ್ಥಾನ (205), ಕರ್ನಾಟಕ ಮೂರನೇಸ್ಥಾನ(198), ಮಹಾರಾಷ್ಟ್ರ ನಾಲ್ಕನೇಸ್ಥಾನ(153) ಹಾಗೂ ಗುಜರಾತ್ ಐದನೇಸ್ಥಾನ(152) ದಲ್ಲಿದೆ. ಕಳೆದ ವರ್ಷ ಅಂಗಾಂಗ ದಾನಿಗಳಿಂದ ಪಡೆದ ಅಂಗಾಂಗ ವರ್ಷವೊಂದರಲ್ಲಿ ಪಡೆದ ಗರಿಷ್ಠ ದಾನವಾಗಿದ್ದರೆ, ಅಂಗಾಂಶಗಳ ಮಟ್ಟಿಗೂ ಕಳೆದ ವರ್ಷದ್ದೇ ಗರಿಷ್ಠ ಎಂಬುದು ಗಮನಾರ್ಹ. 2025ರ ಸಾಲಿನಲ್ಲಿ ಒಟ್ಟು 397 ಅಂಗಾಂಶಗಳನ್ನು ಪಡೆಯಲಾಗಿದ್ದು ಇದರಲ್ಲಿ 288 ಕಣ್ಣಿನ ಕಾರ್ನಿಯಾ ಆಗಿವೆ.

ವರ್ಷವಾರು ಅಂಗಾಂಗ ದಾನದ ಅಂಕಿ ಅಂಶಗಳನ್ನು ನೋಡಿದರೆ 2021ರಲ್ಲಿ 70 ದಾನಿಗಳಿಂದ 187 ಅಂಗಾಂಗಗಳು, 22ರಲ್ಲಿ 151 ದಾನಿಗಳಿಂದ 415 ಅಂಗಾಂಗಗಳು, 23ರಲ್ಲಿ 178 ದಾನಿಗಳಿಂದ 469 ಅಂಗಾಂಗಗಳು, 24ರಲ್ಲಿ 162 ದಾನಿಗಳಿಂದ 457 ಅಂಗಾಂಗಗಳು ಹಾಗೂ ಮೊದಲೇ ತಿಳಿಸಿದಂತೆ 25ರಲ್ಲಿ 198 ದಾನಿಗಳಿಂದ 553 ಅಂಗಾಂಗಗಳನ್ನು ನಮ್ಮ ರಾಜ್ಯದಲ್ಲಿ ದಾನವಾಗಿ ಪಡೆಯಲಾಗಿದೆ. ಈ ಅಂಕಿ ಅಂಶಗಳು ನಮ್ಮ ರಾಜ್ಯದಲ್ಲಿ ಅಂಗಾಂಗ ದಾನದ ಬಗ್ಗೆ ಅರಿವು ಹೆಚ್ಚುತ್ತಿರುವುದನ್ನು ಸ್ಪಷ್ಟಪಡಿಸಿವೆ. ಇದು ಸ್ವಾಗತಾರ್ಹ ವಿಚಾರ.

'ರಾಜ್ಯದ ಎಲ್ಲ ವೈದ್ಯಕೀಯ ಕಾಲೇಜು, ಆಸ್ಪತ್ರೆಗಳಲ್ಲಿ ಅಂಗಾಂಗ ಮರು ಪಡೆಯುವಿಕೆ ಕೇಂದ್ರ ಪ್ರಾರಂಭಿಸಬೇಕು' ಎಂದು ರಾಷ್ಟ್ರೀಯ ದೇಹಾಂಗ ದಾನ ಜಾಗೃತಿ ಸಮಿತಿ ಸದಸ್ಯರಾದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಈಚೆಗೆ ಹೇಳಿರುವುದು ಅಂಗಾಂಗ ದಾನದ ಅಗತ್ಯವನ್ನೂ ಸಾರಿ ಹೇಳಿದಂತಿದೆ.

'ರಾಷ್ಟ್ರೀಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆ'ಯ (National organ and tissue transplant organization – NOTTO) ಅಂಕಿ ಅಂಶಗಳ ಪ್ರಕಾರ, ನಮ್ಮ ದೇಶದಲ್ಲಿ ವರ್ಷಕ್ಕೆ ಎರಡು ಲಕ್ಷ ನೇತ್ರ ದೇಣಿಗೆಯ ಅಗತ್ಯವಿದೆ. ಅದೇ ರೀತಿ ವಿವಿಧ ಅಂಗಗಳನ್ನು ಪಡೆಯಲು ಹಪಹಪಿಸುವವರ ಸಂಖ್ಯೆಯೂ ದೊಡ್ಡದಿದೆ. ಈ ಮಧ್ಯೆ, ಮೆದುಳು ನಿಷ್ಕ್ರಿಯವಾದ ನಂತರ ಅಂಗಾಂಗಗಳನ್ನು ದಾನ ಮಾಡಿದ ಕುಟುಂಬಗಳಿಗೆ ಗೌರವ ಸಲ್ಲಿಸಲು, 2024ರ ಮಾರ್ಚ್ 1ರಂದು ಕರ್ನಾಟಕ ರಾಜ್ಯ ಮುಖ್ಯಮಂತ್ರಿಗಳು ಪ್ರಶಂಸಾ ಪತ್ರ ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು. ಪ್ರತಿ ವರ್ಷ ಗಣರಾಜ್ಯೋತ್ಸವ ಹಾಗೂ ಸ್ವಾತಂತ್ರ್ಯ ದಿನಾಚರಣೆ ದಿನ ಈ ಪ್ರಶಂಸಾ ಪತ್ರ ವಿತರಿಸಲಾಗುತ್ತಿರುವುದು ಶ್ಲಾಘನೀಯ.

ಅಂಗಾಂಗ ದಾನ ಮಾಡಿದವರು ಸಾವಿನ ನಂತರವೂ ಯಾವುದಾದರೂ ಒಂದು ರೂಪದಲ್ಲಿ ಮತ್ತೊಬ್ಬರ ಜೀವನದ ಮೂಲಕ ಅಸ್ತಿತ್ವ ಕಂಡುಕೊಂಡಿರುತ್ತಾರೆ. ಆಪ್ತೇಷ್ಟರನ್ನು ಕಳೆದುಕೊಂಡ ಸಂದರ್ಭದಲ್ಲೂ ಪರೋಪಕಾರದ ಬಗ್ಗೆ ಮೃತರ ಮನೆಯವರು ಯೋಚಿಸುವುದು ಮಾನವೀಯತೆಯ ಸೆಲೆ ಜೀವಂತವಾಗಿರುವುದರ ಸಂಕೇತ. ಅಪಘಾತಕ್ಕೊಳಗಾಗಿ ಮೆದುಳು ನಿಷ್ಕ್ರಿಯಗೊಂಡ ಮೇಲೆ ಯುವಕ–ಯುವತಿಯರ ಅಂಗಾಂಗ ದಾನ ಮಾಡುವವರು 'ಆಪದ್ಬಾಂಧವ'ರಂತೆ ಕಾಣಿಸುತ್ತಾರೆ. 'ನೀನಾರಿಗಾದೆಯೋ ಎಲೆ ಮಾನವ?' ಎನ್ನುವ ಪ್ರಶ್ನೆಗೆ ಮನುಷ್ಯನ ದೇಹವನ್ನೇ ಉತ್ತರವನ್ನಾಗಿ ನೀಡಬಹುದು.

■ ಉಮಾ ಅನಂತ್




ವಿಜಯ